# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. : 20 ಪ್ರಾ.ಸಾ. : 05**

**ದಿನಾಂಕಃ 09-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಆರ್.ಕೆ.ಎಂ ವಕೀಲರಿಂದ**

16. ನನ್ನ ಹುಟ್ಟಿದ ದಿನಾಂಕಃ 17-01-1998 ಇರುತ್ತದೆ. ನಾನು ಶಾಲಗೆ ಹೋಗುತ್ತಿದ್ದ ದಿನಗಳಿಂದಲೇ 1 ನೇ ಆರೋಪಿಯನ್ನು ನೋಡಿರುತ್ತೇನೆ ಹಾಗೂ ಆತ ನನ್ನ ಬಾವನ ಗೆಳೆಯನಾಗಿದ್ದು, ಅವರ ಮನೆಗೆ ಬಂದು ಹೋಗುತ್ತಿದ್ದ. ನಮ್ಮ ಮನೆ ಶಿರವಾಡದಲ್ಲಿರುತ್ತದೆ ಹಾಗೂ ನನ್ನ ಅಕ್ಕ ಮತ್ತು ಬಾವ ಪೋರ್ಟ ಕಾಲೋಯಲ್ಲಿ ವಾಸವಾಗಿದ್ದರು. ನನ್ನ ಅಕ್ಕ ಫ್ರಾಸಾ-4 ಈಗ ಕಳೆದ ಒಂದೂವರೆ ವರ್ಷಗಳ ಹಿಂದೆ ಬೇರೆ ಮದುವೆಯಾಗಿದ್ದು, ಆತನ ಹೆಸರು ಬಸಪ್ಪ ನಾಯ್ಕ. ನಾನು 1 ನೇ ಆರೋಪಿಯನ್ನು ಈ ಪ್ರಕರಣದಲ್ಲಿ ಸಾಕ್ಷಿ ನೀಡಲು ನ್ಯಾಯಾಲಯಕ್ಕೆ ಬಂದಾಗ ಮೊದಲ ಬಾರಿಗೆ ನೋಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಬಾವನ ಅಕ್ಕನ ಮನೆಗೆ ಮನೆಗೆ ಟ್ಯೂಷನ್ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ಬಾವನ ಗೆಳೆಯನಲ್ಲ ಎಂದರೆ ಸರಿಯಲ್ಲ.

17. 1 ನೇ ಆರೋಪಿ ಮತ್ತು ನನ್ನ ಬಾವ ಪಾಲುದಾರಿಕೆಯ ಮೆಲೆ ಶಿಪ್ಪಿಂಗ್ ಏಜೆನ್ಸಿ ನಡೆಸುತ್ತಿದ್ದ ಬಗ್ಗೆ ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ. ಆದರೆ ಈ ವಿಷಯವನ್ನು ನಾನು ನನ್ನ ಅಕ್ಕ ಮತ್ತು ಬಾವನಿಂದ ಕೇಳಿ ತಿಳಿದುಕೊಂಡಿರುತ್ತೇನೆ. ನನ್ನ ಅಕ್ಕ ಮತ್ತು ಬಾವ ನನ್ನ ಬಳಿ ಶಿಪ್ಪಿಂಗ್ ಏಜೆನ್ಸಿ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ನನ್ನ ಬಾವನನ್ನು ಶಿಪ್ಪಿಂಗ್ ಏಜೆನ್ಸಿ ಸೇರಿಸಿಕೊಳ್ಳದ ಕಾರಣ ನನ್ನ ಬಾವ ಆತನ ಮೇಲೆ ನ್ಯಾಯಾಲಯಗಳಲ್ಲಿ ದಾವೆ ಹೂಡಿದ ಬಗ್ಗೆ , ಪೊಲೀಸ್ ಠಾಣೆಗಳಲ್ಲಿ ದೂರು ನೀಡಿದ ಬಗ್ಗೆ ಅಥವಾ ಯಾವುದೇ ಕಾನೂನು ಕ್ರಮ ಕೈಗೊಂಡ ಬಗ್ಗೆ ನನಗೆ ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ನನ್ನ ಬಾವ ಹಾಗೂ 1 ನೇ ಆರೋಪಿ ಶಿಪ್ಪಿಂಗ್ ಏಜೆನ್ಸಿಯನ್ನು ಪಾಲುದಾರಿಕೆಯಲ್ಲಿ ತೆರೆಯುವಾ

ಎಂದು ಮಾತನಾಡಿಕೊಂಡು ನಂತರ 1 ನೇ ಆರೋಪಿ ಒಬ್ಬನೇ ಶಿಪ್ಪಿಂಗ್ ಏಜೆನ್ಸಿ ಯನ್ನು ತೆರೆದಿರುತ್ತಾನೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

18. ಪೊಯಿನೂರು ಶಿಪ್ಪಿಂಗ್ ಕಂಪನಿಯಲ್ಲಿ ನನ್ನ ಬಾವ ಒಬ್ಬ ಕೆಲಸಗಾರರಾಗಿದ್ದರು. ಕಾರವಾರದ ಪೊಯಿನೂರು ಶಿಪ್ಪಿಂಗ್ ಕಂಪನಿಯಲ್ಲಿ ಎಷ್ಟು ಜನ ಕೆಲಸಗಾರರು ಇದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಕಂಪನಿಯ ವ್ಯವಹಾರದ ಬಗ್ಗೆ ನನ್ನ ಬಾವ ನನ್ನ ಬಳಿ ಹೇಳಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ 2 ನೇ ಆರೋಪಿ ನನ್ನ ಬಾವನ ಶಿಪ್ಪಿಂಗ್ ಕಂಪನಿಯ ಮಾಹಿತಿಯನ್ನು ನೀಡುತ್ತಿದ್ದಾನೆ ಎಂದು ನನ್ನ ಬಾವ ನನ್ನ ಬಳಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ನನ್ನ ಬಾವನ ಮೇಲೆ ಸಿಟ್ಟಾಗುವ ಸಂದರ್ಭ ಬಂದಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೂ ಹಾಗೂ ಪೊಯಿನೂರು ಶಿಪ್ಪಿಂಗ್ ಕಂಪನಿಗೂ ಯಾವುದೇ ಸ್ಪರ್ದೆ ಇರಲಿಲ್ಲ ಎಂದರೆ ಸರಿಯಲ್ಲ. 2018 ನೇ ಇಸ್ವಿಯಲ್ಲಿ ನಾನು ನನ್ನ ಶಿಕ್ಷಣವನ್ನು ಮುಗಿಸಿ ಕೆಲಸ ಮಾಡುತ್ತಿದ್ದೆ. ನನ್ನ ಬಾವ ಕಾಣೆಯಾದ ಬಗ್ಗೆ ದೂರು ನೀಡಲು ಹೋದಾಗ, 1 ನೇ ಆರೋಪಿಯ ಹೆಸರನ್ನು ಪ್ರಸ್ತಾಪ ಮಾಡಲಾಯಿತೆ ? ಎಂದರೆ ಸಾಕ್ಷಿಯು ನನ್ನ ತಂದೆಯವರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾಪತ್ತೆಯಾದ ಬಗ್ಗೆ ದೂರನ್ನು ನನ್ನ ತಂದೆಯವರು ನೀಡಿರುತ್ತಾರೆ.

19. ದಿಃ 17-10-2018 ರಂದು ನೀಡಿದ ದೂರನ್ನು ನನ್ನ ತಂದೆ ಹಾಗೂ ನನ್ನ ಬಾವನ ಅಣ್ಣ ನೀಡಿರುತ್ತಾರೆ ಹಾಗೂ ಅದರಲ್ಲಿ 1 ನೇ ಆರೋಪಿಯ ಹೆಸರನ್ನು ಪ್ರಸ್ತಾಪ ಮಾಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಖಾನಾಪುರದ ಪೊಲೀಸ್ ಠಾಣೆಯಲ್ಲಿ ಚಾಸಾ-32 ರವರ ಮೊಬೈಲ್ ನಲ್ಲಿ ಸಂಗ್ರಹವಾದ ಸಂಭಾಷಣೆಯನ್ನು ನಮ್ಮ ಮುಂದೆ ಕೇಳಿಸಿಲ್ಲ ಎಂದರೆ ಸರಿಯಲ್ಲ. ಮೊಬೈಲ್ ಸಂಭಾಷಣೆಯನ್ನು ಕೇಳಿಸಿದ ಬಗ್ಗೆ ಯಾವುದೇ ಹೇಳಿಕೆ ಮಾಡಿಲ್ಲ ಹಾಗೂ ನಮ್ಮ ಸಹಿಯನ್ನು ಪಡೆದುಕೊಂಡಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ನಾವು ಮೊದಲಿಗೆ ಸತಾರಕ್ಕೆ ಹೋದೆವು ನಂತರ ಬೆಳಗಾಂವ, ಕೊಲ್ಲಾಪುರ ಮತ್ತು ಖಾನಾಪುರಕ್ಕೆ ಹೋಗಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಖಾನಾಪುರದಲ್ಲಿ ಚಾಸಾ-32 ರವರನ್ನು ಭೇಟಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಕೊಲ್ಲಾಪುರದ ಯಾವುದೇ ಟ್ರಾವೆಲ್ಸ್ ಏಜೆನ್ಸಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಕಾರವಾರದಿಂದ ಹೊರಟು ಪುನಃ ವಾಪಸು ಬರುವವರೆಗೂ 3 ದಿನಗಳ ಕಾಲ

ಪೊಲೀಸರೊಂದಿಗೆ ಪ್ರಯಾಣಿಸಿರುತ್ತೇವೆ. ಸದರಿ 3 ದಿನಗಳಲ್ಲಿ ಪೊಲೀಸರು 5 ಕಡೆ ಪಂಚನಾಮೆಗಳಲ್ಲಿ ನಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ 5 ಪಂಚನಾಮೆಗಳ ಪೈಕಿ ದಿಃ 18-10-2018 ರಂದು 2 ಪಂಚನಾಮೆಗಳು, ದಿಃ 19-10-2018 ರಂದು 2 ಪಂಚನಾಮೆಗಳು ಮತ್ತು ದಿಃ20-10-2018 ರಂದು 1 ಪಂಚನಾಮೆಯನ್ನು ಮಾಡಿರುತ್ತಾರೆ.

20. 2 ನೇ ಆರೋಪಿಯು ನಮ್ಮ ಸಮಕ್ಷಮ "1 ನೇ ಆರೋಪಿಯು ನನ್ನ ಬಳಿ ಪ್ರೇಮಕುಮಾರನ ವ್ಯವಹಾರ ಚೆನ್ನಾಗಿ ನಡೆಯುತ್ತಿದ್ದು, ನನಗೆ ಯಾವುದೇ ಕೆಲಸ ಬರದೆ ಇದ್ದರೇ, ಒಂದು ದಿನ ನನ್ನ ಕಂಪನಿಯನ್ನು ಮುಚ್ಚಬೇಕಾಗುತ್ತದೆ, ಆದ್ದರಿಂದ ನೀನು, ಯಾರಾದರು ಒಬ್ಬರ ಸಹಾಯ ಪಡೆದುಕೊಂಡು ಪ್ರೇಮಕುಮಾರನನ್ನು ಕೊಲೆ ಮಾಡು ಹಾಗೂ ನಾನು ನಿನಗೆ, ನನ್ನ ಕಂಪನಿಯಲ್ಲಿ ಒಳ್ಳೆಯ ಕೆಲಸವನ್ನು ಕೊಡುತ್ತೇನೆ ಹಾಗೂ ರೂ.2,00,000/- ಹಣವನ್ನು ಕೊಡುತ್ತೇನೆ ಅದಲ್ಲದೇ ನಿನಗೆ ಸಹಾಯ ಮಾಡುವ ವ್ಯಕ್ತಿಗೂ ಸಹ ರೂ.2,00,000/- ಹಣವನ್ನು ಕೊಡುತ್ತೇನೆ ಎಂದು ಹೇಳಿದ" ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಬಾವನ ಶವವನ್ನು ಎಂದಿಗೂ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಶವ ಸಿಕ್ಕ ಸ್ಥಳದಲ್ಲಿ ಪೊಲೀಸರು ನನ್ನಿಂದ ಯಾವುದೇ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ. ಶವ ಸಿಕ್ಕ ಸ್ಥಳದಲ್ಲಿ ಪಂಚನಾಮೆ ಮಾಡುವ ಸಮಯದಲ್ಲಿ 2 ಮತ್ತು 3 ನೇ ಆರೋಪಿಗಳು 1 ನೇ ಆರೋಪಿಯ ಬಗ್ಗೆ ಯಾವುದೇ ವಿಷಯವನ್ನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. 4 ಮತ್ತು 5 ನೇ ಆರೋಪಿಗಳು 1 ನೇ ಆರೋಪಿಗೆ ತಪ್ಪಿಸಿಕೊಳ್ಳಲು ಸಹಾಯ ಮಾಡಿರುತ್ತಾರೆ ಎಂದು ಪೊಲೀಸರು ನನ್ನ ಬಳಿ ಹೇಳಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಕೃತ್ಯದಲ್ಲಿ 1 ನೇ ಆರೋಪಿಯು ಬಾಗಿಯಾಗಿಲ್ಲದಿದ್ದರೂ ಸಹ ಆತನ ವಿರುದ್ಧ ವಿನಾಃ ಕಾರಣ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದ</u>**

21. ನಾನು ಐ.ಟಿ.ಐ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು 1 ರಿಂದ 10 ನೇ ತರಗತಿ ವರೆಗೆ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು-ಬರೆಯಲು ಬರುತ್ತದೆ. ಅದೇ ರೀತಿ ನನ್ನ ತಂದೆಯವರೆಗೂ ಸಹ ಕನ್ನಡ ಓದಲು-ಬರೆಯಲು ಬರುತ್ತಿತ್ತು. ನಾನು ಈ ದಿನ ನ್ಯಾಯಾಲಯಕ್ಕೆ ಬಂದ ನಂತರ ಈ ದಿನ ನ್ಯಾಯಾಲಯಕ್ಕೆ ಬಂದಿರುವ ಫ್ರಾಸಾ-3

ರವರೊಂದಿಗೆ ಇದ್ದೆನು ಎಂದರೆ ಸರಿ. ನನ್ನ ಬಾವನ ಅಣ್ಣನಿಗೆ ಕನ್ನಡ ಓದಲು-ಬರೆಯಲು ಬರುವುದಿಲ್ಲ. ನನ್ನ ಬಾವನ ಮರಣೋತ್ತರ ಪರೀಕ್ಷೆಯನ್ನು ಮಾಡುವ ಸಮಯದಲ್ಲಿ ಸುಮಾರು 15 ಜನರು ಇದ್ದೆವು. ಈ 15 ಜನರ ಪೈಕಿ ಮೃತನ ಸಂಬಂಧಿಗಳಾಗಿ ನಾನು ಮತ್ತು ಪ್ರಾಸಾ-3 ರವರು ಇದ್ದೆವು, 9 ಜನ ಪೊಲೀಸರು ಇದ್ದರು. ಸದರಿ ಸ್ಥಳಕ್ಕೆ ನನ್ನ ಹಾಗೂ ಪ್ರಾಸಾ-3 ರವರನ್ನು ಬಿಟ್ಟು ನಮ್ಮ ಸಂಬಂಧಿಕರಾಗಲೀ ಅಥವಾ ನನ್ನ ಬಾವನ ಗೆಳೆಯರಾಗಲೀ ಬಂದಿರುವುದಿಲ್ಲ. ನನ್ನ ಬಾವನ ಮರಣೋತ್ತರ ಪರೀಕ್ಷೆಯನ್ನು ಮಾಡುವ ಸಮಯದಲ್ಲಿ 3 ಜನ ಆಸ್ಪತ್ರೆಯ ಸಿಬ್ಬಂದಿಗಳು ಬಂದಿದ್ದರು.

22. ಪೊಲೀಸ್ ಠಾಣೆಯಿಂದ ಶವ ಬಿದ್ದ ಸ್ಥಳಕ್ಕೆ ಹೋಗುವಾಗ ಒಟ್ಟು 6 ವಾಹನಗಳಲ್ಲಿ ಹೋಗಿರುತ್ತೇವೆ. ಸದರಿ 6 ವಾಹನಗಳಿಗೆ 6 ಜನ ಚಾಲಕರು ಬೇಕು ಎಂದರೆ ಸರಿ. ಸದರಿ ಚಾಲಕರೂ ಸಹ ಶವ ಬಿದ್ದ ಸ್ಥಳಕ್ಕೆ ಬಂದಿದ್ದರು. ನಾವು ಶವ ಬಿದ್ದ ಸ್ಥಳಕ್ಕೆ ಹೋದಾಗ ಆ ದಿನ ಮದ್ಯಾಹ್ನ 12-00 ಗಂಟೆಯಾಗಿರುತ್ತದೆ. ಮರಣೋತ್ತರ ಪರೀಕ್ಷೆಯನ್ನು ಸುಮಾರು ಒಂದು ಗಂಟೆಗಳ ಕಾಲ ಎಂದರೆ 12-30 ರಿಂದ 01-30 ಗಂಟೆಯ ವರೆಗೆ ಮಾಡಿರುತ್ತಾರೆ. ಮರಣೋತ್ತರ ಪರೀಕ್ಷೆಯ ನಂತರ ನನ್ನ ಬಾವನ ಶವವನ್ನು ಪ್ರಾಸಾ-3 ರವರಿಗೆ ಸ್ಥಳದಲ್ಲಿ ಹಸ್ತಾಂತರಿಸಿರುತ್ತಾರೆ. ನನ್ನ ಬಾವನ ಶವವನ್ನು ಪೊಲೀಸರ ಸಹಾಯದೊಂದಿಗೆ ಮೇಲೆ ತಂದಿರುತ್ತೇವೆ. ಶವವನ್ನು ಅರಣ್ಯ ಪ್ರದೇಶದಿಂದ ಮೇಲಿನ ಸ್ಥಳಕ್ಕೆ ತಂದಾಗ ಸಂಜೆ 04-30 ರಿಂದ 05-00 ಗಂಟೆಯಾಗಿರುತ್ತದೆ. ನನ್ನ ಬಾವನ ಶವವನ್ನು 04-30 ರಿಂದ 05-00 ಗಂಟೆ ಸಮಯದಲ್ಲಿ ವಾಹನಗಳನ್ನು ನಿಲ್ಲಿಸಿದ ಸ್ಥಳದಲ್ಲಿ ನಮಗೆ ಹಸ್ತಾಂತರಿಸಿರುತ್ತಾರೆ. ಶವವನ್ನು ಪ್ರಾಸಾ-3 ರವರಿಗೆ ಹಸ್ತಾಂತರಣ ಮಾಡುವಾಗ ಪಂಚನಾಮೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ.

23. ಆಕಳಗವಿ ಅರಣ್ಯ ಪ್ರದೇಶದಲ್ಲಿ ಒಟ್ಟು 5 ಪಂಚನಾಮೆಗಳನ್ನು ಮಾಡಿರುತ್ತಾರೆ. ಸದರಿ ಪಂಚನಾಮೆಗಳನ್ನು ಮಾಡುವ ಸಮಯದಲ್ಲಿ ತೆಗೆದ ಪೋಟೋಗಳಲ್ಲಿ ನಾನು ಇರುತ್ತೇನೆ. ಆದರೆ ಪಂಚನಾಮೆಗಳಿಗೆ ನಾನು ಸಹಿ ಮಾಡಿರುವುದಿಲ್ಲ. ಸದರಿ 5 ಪಂಚನಾಮೆಗಳನ್ನು ಸುಮಾರು 04-30 ರಿಂದ 05-30 ರ ವರೆಗೆ ಮಾಡಿರುತ್ತಾರೆ. ಆ ದಿನ ಶವವನ್ನು ಸಂಜೆ 06-30 ರಿಂದ 07-00 ಗಂಟೆಯ ನಡುವೆ ಮನೆಗೆ ತಂದಿರುತ್ತೇವೆ. ಶವವನ್ನು ಮನೆಗೆ ತಂದಾಗ ಮುಖದ ಭಾಗವನ್ನು ಬಿಟ್ಟು ದೇಹದ ಬೇರೆ ಭಾಗವನ್ನು ತೋರಿಸಿರುವುದಿಲ್ಲ ಎಂದರೆ ಸರಿ. 2 ನೇ ಆರೋಪಿಯನ್ನು 2013 ರಿಂದ ನೋಡಿರುತ್ತೇನೆ. ಆ ಸಮಯದಲ್ಲಿ ನಾನು 10 ನೇ ತರಗತಿ ಓದುತ್ತಿದ್ದೆ. ನನ್ನ ಶಾಲಾ ಸಮಯ ಬೆಳಿಗ್ಗೆ 09-30 ರಿಂದ ಸಂಜೆ 05-30 ರ ವರೆಗೆ

ಇದ್ದಿರುತ್ತದೆ. ಪೊಯಿನೂರು ಶಿಪ್ಪಿಂಗ್ ಕಂಪನಿಗೆ ನಿರ್ದಿಷ್ಟವಾದ ಕೆಲಸದ ಸಮಯ ಇರುವುದಿಲ್ಲ. ಪೊಯಿನೂರು ಶಿಪ್ಪಿಂಗ್ ಕಂಪನಿಯು ಬಂದರಿನಲ್ಲಿರುತ್ತದೆ ಎಂದರೆ ಸರಿ. ನಮ್ಮ ಮನೆಯಿಂದ ಬಂದರಿಗೆ ಸುಮಾರು 8 ಕಿ.ಮೀ ದೂರ ಆಗುತ್ತದೆ. ನಮ್ಮ ಮನೆಯಿಂದ ಶಾಲೆಗೆ 6 ಕಿ.ಮೀ ದೂರ ಆಗುತ್ತದೆ. 2 ನೇ ಆರೋಪಿಯು ದಾಂಡೇಲಿಯವನು. ಆದರೆ ಆತ ಏನು ಕೆಲಸ ಮಡುತ್ತಿದ್ದ ಎಂದು ನನಗೆ ಗೊತ್ತಿಲ್ಲ. 2 ನೇ ಆರೋಪಿಯು ಎಂದಿಗೂ ಕಾರವಾರಕ್ಕೆ ಬಂದಿರುವುದಿಲ್ಲ ಹಾಗೂ ನಾನು ಆತನನ್ನು ಎಂದಿಗೂ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ 2 ನೇ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

24. ಮಂಗಳೂರಿನ ಶರೀಫರವರು ತಮ್ಮ ಪೊಯಿನೂರು ಶಿಪ್ಪಿಂಗ್ ಕಂಪನಿಯನ್ನು ನೋಡಿಕೊಳ್ಳಲು ನನ್ನ ಬಾವನಿಗೆ ಯಾವಾಗ ಬಿಟ್ಟುಕೊಟ್ಟರು ಎಂದು ನನಗೆ ಗೊತ್ತಿಲ್ಲ. ಪೊಯಿನೂರು ಶಿಪ್ಪಿಂಗ್ ಕಂಪನಿಯಲ್ಲಿ ನಡೆಯುವ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಪೊಯಿನೂರು ಶಿಪ್ಪಿಂಗ್ ಕಂಪನಿಯಲ್ಲಿ ನಡೆಯುವ ವ್ಯವಹಾರದ ಬಗ್ಗೆ ಅಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ಮಾತ್ರ ತಿಳಿಯುತ್ತದೆ ಹಾಗೂ ಅದು ಹೊರಗಿನವರಿಗೆ ತಿಳಿಯುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 2 ನೇ ಆರೋಪಿ ಪೊಯಿನೂರು ಶಿಪ್ಪಿಂಗ್ ಕಂಪನಿಯಲ್ಲಿ ಕೆಲಸ ಮಾಡಿರುವುದಿಲ್ಲ. 2 ನೇ ಆರೋಪಿ ಪೊಯಿನೂರು ಶಿಪ್ಪಿಂಗ್ ಕಂಪನಿಯಲ್ಲಿ ಕೆಲಸ ಮಾಡದ ಕಾರಣ ಅಲ್ಲಿ ಏನು ನಡೆಯುತ್ತದೆ ಎಂದು ಆತನಿಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ಆತನು ನನ್ನ ಬಾವನ ಗೆಳೆಯನಾದ ಕಾರಣ ಆತನಿಗೆ ಪೊಯಿನೂರು ಶಿಪ್ಪಿಂಗ್ ಕಂಪನಿಯ ವ್ಯವಹಾರಗಳು ನನ್ನ ಬಾವನ ಮೂಲಕ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. 2 ನೇ ಆರೋಪಿ ಹಾಗೂ ನನ್ನ ಬಾವನ ಪೊಯಿನೂರು ಶಿಪ್ಪಿಂಗ್ ಕಂಪನಿಯ ಬಗ್ಗೆ ಮಾತನಾಡಿದ ಸಂದರ್ಭವನ್ನು ನಾನು ನೋಡಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ 2 ನೇ ಆರೋಪಿಯು ನನ್ನ ಬಾವನ ಕಂಪನಿಯ ಎಲ್ಲಾ ಮಾಹಿತಿಯನ್ನು 1 ನೇ ಆರೋಪಿಗೆ ತಿಳಿಸುತ್ತಿದ್ದ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

25. ದಿಃ 16-10-2018 ರಂದು ಸಂಜೆ 06-00 ಗಂಟೆ ನನ್ನ ಅಕ್ಕ ನನಗೆ ಕರೆ ಮಾಡಿದಾಗ ನಾನು ಆಗ ಮನೆಯಲ್ಲಿದ್ದೆ. ನಮ್ಮ ಮನೆಯಿಂದ ನನ್ನ ಅಕ್ಕನ ಮನೆಗೆ 7 ½ ಕಿ.ಮೀ ದೂರ ಇರುತ್ತದೆ. ಆ ದಿನ ನನ್ನ ಅಕ್ಕ ಕರೆ ಮಾಡಿದ ವಿಷಯವನ್ನು ಮನೆಯಲ್ಲಿದ್ದ ನನ್ನ ತಂದೆಯವರಿಗೆ

ತಿಳಿಸಿರುತ್ತೇನೆ. ನಾವು ಆ ದಿನ ನನ್ನ ಅಕ್ಕನ ಮನೆಗೆ ಹೋಗುವಷ್ಟರಲ್ಲಿ ಫ್ರಾಸಾ-3 ರವರು ಅಲ್ಲಿಗೆ ಬಂದಿದ್ದರು. ದಿಃ 16-10-2018 ರಂದು ರಾತ್ರಿ 09-00 ಗಂಟೆಗೆ ನಾವು ಠಾಣೆಗೆ ಹೋದಾಗ ಠಾಣೆಯಲ್ಲಿ ಪಿ.ಎಸ್.ಐ ರವರು ಇರುವುದಿಲ್ಲ. ಆ ದಿನ ನಾವು ಯಾವುದೇ ಲಿಖಿತ ದೂರನ್ನು ನೀಡಿರುವುದಿಲ್ಲ. ಮರುದಿನ ದಿಃ 17-10-2018 ರಂದು ದೂರು ನೀಡಲು ಹೋದಾಗ ನಾವು 3 ಜನರನ್ನು ಹೊರತುಪಡಿಸಿ ಬೇರೆ ಯಾರು ಬಂದಿರುವುದಿಲ್ಲ. ಸದರಿ ದೂರನ್ನು ನನ್ನ ತಂದೆಯವರು ಹೇಳಿದಂತೆ ಪೊಲೀಸರು ಕೈಯಿಂದ ಬರೆದುಕೊಂಡಿರುತ್ತಾರೆ. ದೂರನ್ನು ಬರೆದ ನಂತರ ನನ್ನ ತಂದೆಯವರು ಸಹಿ ಮಾಡಿರುತ್ತಾರೆ. ಸದರಿ ದೂರನ್ನು ಬರೆದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ನಾವು ಠಾಣೆಗೆ ಹೋಗದೆ ಇದ್ದರೂ ಸಹ ಠಾಣೆ ಹೋಗಿ ನನ್ನ ಬಾವ ಕಾಣೆಯಾದ ಬಗ್ಗೆ ದೂರನ್ನು ನೀಡಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

26. ದಿಃ 17-10-2018 ರಂದು ಸಂಜೆ 06-00 ಗಂಟೆಗೆ ಪೊಲೀಸರು ನನ್ನ ತಂದೆಯವರ ಮೊಬೈಲ್ ಗೆ ಕರೆ ಮಾಡಿ ಠಾಣೆಗೆ ಬರುವಂತೆ ತಿಳಿಸಿರುತ್ತಾರೆ. ನಮ್ಮೊಂದಿಗೆ ಮಹಾರಾಷ್ಟ್ರಕ್ಕೆ ಬಂದ ನನ್ನ ಗೆಳೆಯರ ಹೆಸರು ರಮೇಶ ಮತ್ತು ಸುರೇಶ ಇರುತ್ತದೆ. ಅದೇ ರೀತಿ ನಮ್ಮೊಂದಿಗೆ ಬಂದಿದ್ದ 2 ಜನ ಪೊಲೀಸರು ಹೆಸರು ನನಗೆ ಗೊತ್ತಿಲ್ಲ. ಇನೋವಾ ಕಾರಿನಲ್ಲಿ ಒಟ್ಟು ನಾವು 6 ಜನ ಹೋಗಿರುತ್ತೇವೆ. ಸದರಿ ಇನೋವಾ ಕಾರಿನ ನಂಬರ್ ನನಗೆ ಹೇಳಲು ಬರುವುದಿಲ್ಲ. ನಮಗೆ ಹಾಗೂ 2 ಜನ ಪೊಲೀಸರಿಗೆ ಮಹಾರಾಷ್ಟ್ರ ಕಡೆಗೆ ಹೋಗಿ ಹುಡುಕುವಂತೆ ಪಿ.ಎಸ್.ಐ ರವರು ಸೂಚಿಸಿರುತ್ತಾರೆ. ನಾವು ಸತಾರಕ್ಕೆ ಹೋಗಲು ಕಾರವಾರದಿಂದ ಹೊರಟು, ಕದ್ರಾ, ಬೆಳಗಾವಿ, ಕೊಲ್ಲಾಪುರದ ಮೂಲಕ ಸತಾರಕ್ಕೆ ತಲುಪಿರುತ್ತೇವೆ. ನಾವು ಆ ದಿನ ರಾತ್ರಿ ಬೆಳಗಾವಿ ತಲುಪಿದಾಗ ಮಧ್ಯ ರಾತ್ರಿಯಾಗಿತ್ತು. ಸತಾರದ ಯಾವ ಪ್ರದೇಶ ಪೊಲೀಸ್ ಠಾಣೆಗೆ ನಾವು ಹೋಗಿದ್ದೇವು ಎಂದು ನನಗೆ ನೆನಪಿಲ್ಲ. ಸಾಕ್ಷಿಯು ನಮ್ಮೊಂದಿಗೆ ಬಂದಿದ್ದ 2 ಜನ ಪೊಲೀಸರಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಸತಾರ ಪೊಲೀಸ್ ಠಾಣೆಯಿಂದ ಮಾಹಿತಿ ಸಿಕ್ಕ ಲೋಕೇಷನ ಸ್ಥಳ ಸುಮಾರು 5 ರಿಂದ 6 ಕಿ.ಮೀ ಇತ್ತು. ಸದರಿ ಲೋಕೇಷನ ಸ್ಥಳ ಸತಾರದ ನಗರ ವ್ಯಾಪ್ತಿಯಲ್ಲಿರುತ್ತದೆ. ಲೋಕೇಷನ ಸಿಕ್ಕ ಸ್ಥಳದಲಿ ನೋಡಿದಾಗ ಅದು ಗೊಡೌನ ಆಗಿದ್ದು, ಅದು ಮುಚ್ಚಿರುತ್ತದೆ. ಅದು ಯಾವ ರೀತಿಯ ಗೊಡೌನ ಎಂದು ನನಗೆ ಗೊತ್ತಿಲ್ಲ. ಸತಾರದಲ್ಲಿ ನಾವು ದಿಃ 18-10-2018ರ ಮದ್ಯಾಹ್ನ 02-00 ಗಂಟೆಯ ವರೆಗೆ ಇದ್ದೆವು.

27. ಲೋಕೆಷನ ಸ್ಥಳದಲ್ಲಿ ಮೊಬೈಲ್ ಸಿಗದ ಸಂಬಂಧ ಸತಾರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಾವು ಸತಾರಕ್ಕೆ ಹೋಗಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸತಾರದಿಂದ ಬೆಳಗಾವಿಗೆ ಆ ದಿನ ರಾತ್ರಿ 09-00 ಗಂಟೆಗೆ ಬಂದಿರುತ್ತೇವೆ. ಆ ನಂತರ ಕಾರವಾರದ ಪೊಲೀಸರ ಸೂಚನೆಯ ಮೇರೆಗೆ ನಾವು ಕೊಲ್ಲಾಪುರಕ್ಕೆ ಹೋಗಿರುತ್ತೇವೆ, ಆಗ ಸಮಯ ಬೆಳಿಗ್ಗೆ 07-00 ರಿಂದ 07-30 ಗಂಟೆ ಆಗಿರುತ್ತದೆ. ಬೆಳಗಾವಿಯಿಂದ ಕೊಲ್ಲಾಪುರ 100 ಕಿ.ಮೀ ದೂರ ಇರುತ್ತದೆ. ಸಾಕ್ಷಿಯು ಮುಂದುವರೆದು ಪ್ರಯಾಣದ ಮಧ್ಯದಲ್ಲಿ ಸಂಕೇಶ್ವರದ ಹತ್ತಿರದ ಪೆಟ್ರೋಲ್ ಬಂಕ್ ಬಳಿ ಕಾರಿನಲ್ಲಿಯೇ ಸ್ವಲ್ಪ ಸಮಯ ವಿಶ್ರಾಂತಿ ಮಾಡಿ, ನಂತರ ಪ್ರಯಾಣ ಮುಂದುವರೆಸಿರುತ್ತೇವೆ ಎಂದು ನುಡಿಯುತ್ತಾರೆ. ಕೊಲ್ಲಾಪುರದ ಟ್ರಾವೆಲ್ ಏಜೆನ್ಸಿ ಹೆಸರು ನನಗೆ ಗೊತ್ತಿಲ್ಲ. ಸದರಿ ಟ್ರಾವೆಲ್ ಏಜೆನ್ಸಿಯ ಮಾಲೀಕರು ಹೆಸರು ನನಗೆ ಗೊತ್ತಿಲ್ಲ. 2 ನೇ ಆರೋಪಿ ಟ್ರಾವೆಲ್ ಏಜೆನ್ಸಿಯಲ್ಲಿ ಬುಕ್ ಮಾಡಿದ ಟೀಕೆಟ್ ನ್ನು ನಮ್ಮ ಜೊತೆ ಬಂದಿದ್ದ ಪೊಲೀಸರು ಪಡೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಜೊತೆ ಬಂದಿದ್ದ ಪೊಲೀಸರು ಸದರಿ ಟ್ರಾವೆಲ್ ಏಜೆನ್ಸಿಯಿಂದ ದಾಖಲೆಯನ್ನು ಪಡೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ಆರೋಪಿ ಮಾತನಾಡಿದ ಟ್ರಾವೆಲ್ ಏಜೆನ್ಸಿಯವರ ಮೊಬೈಲ್ ನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿರುವುದಿಲ್ಲ.

28. ಕೊಲ್ಲಾಪುರದಲ್ಲಿ ನಾವು ಹೋಗಿದ್ದ, ಐಡಿಯಾ ಮೊಬೈಲ್ ಸರ್ವಿಸ್ ಸೆಂಟರ್ ಯಾವ ಪ್ರದೇಶದಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾವು ಕೊಲ್ಲಾಪುಕ್ಕೆ ಹೋಗಿರುವುದಿಲ್ಲ, ಯಾವುದೇ ಏಜೆನ್ಸಿ ಆಗಲೀ ಅಥವಾ ಮೊಬೈಲ್ ಸರ್ವಿಸ್ ಸೆಂಟರ್ ಗೆ ಆಗಲೀ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಕೊಲ್ಲಾಪುರದಲ್ಲಿ ಮದ್ಯಾಹ್ನದ ವರೆಗೆ ಇದ್ದೆವು. ಕೊಲ್ಲಾಪುರದಿಂದ ಜೊಯಿಡಾಕ್ಕೆ ಬಂದಾಗ, ಕಾರವಾರ ಪೊಲೀಸರು ನಮಗೆ ಖಾನಾಪುರಕ್ಕೆ ಹೋಗುವಂತೆ ತಿಳಿಸಿದ್ದು, ಅದರಂತೆ ನಾವು ಅಣಶಿ, ಜೊಯಿಡಾ, ರಾಮನಗರದ ಮೂಲಕ ಖಾನಾಪುರಕ್ಕೆ ಹೋಗಿರುತ್ತೇವೆ. ಖಾನಾಪುರ ಪೊಲೀಸ್ ಠಾಣೆಗೆ ಹೋದಾಗ ನಾವು ಒಳಗೆ ಹೋಗಿರುವುದಿಲ್ಲ, ನಮ್ಮ ಜೊತೆ ಬಂದಿದ್ದ ಪೊಲೀಸರು ಠಾಣೆಯ ಒಳಗೆ ಹೋಗಿದ್ದರು. ಕಾರವಾರ ಪೊಲೀಸರು ಹಾಗೂ ಖಾನಾಪುರ ಪೊಲೀಸರು ಏನು ಮಾತನಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ಖಾನಾಪುರದ ಪೊಲೀಸ್ ಠಾಣೆಯಲ್ಲಿ ಚಾಸಾ-32 ವಾಹಿದ್ ನನ್ನು ಕರೆದುಕೊಂಡು ಬಂದಾಗ, ಪಿ.ಎಸ್.ಐ ಇರುವುದಿಲ್ಲ. ಚಾಸಾ-32 ರವರನ್ನು ಕರೆದುಕೊಂಡ ಬಂದ ನಂತರ ನಾವು ಖಾನಾಪುರ ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ಆತ ವಾಹಿದ್ ಎಂಬ ಬಗ್ಗೆ ನಮಗೆ ವೈಯಕ್ತಿಕ

ಮಾಹಿತಿ ಇಲ್ಲ ಎಂದರೆ ಸರಿ. ಪೊಲೀಸರು ಹೇಳಿದ ಕಾರಣ ಆತ ವಾಹಿದ್ ಎಂದು ನಮಗೆ ತಿಳಿಯಿತು. ಪೊಲೀಸರು ವಾಹಿದ್ ಬಳಿ ಯಾವ ವಿಚಾರವಾಗಿ ವಿಚಾರಣೆ ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಖಾನಾಪುರ ಪೊಲೀಸ್ ಠಾಣೆಯಲ್ಲಿ ವಾಹಿದ್ ನ ಮೊಬೈಲ್ ನ್ನು ಪಡೆದುಕೊಂಡು ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಪಂಚನಾಮೆಯ ಪಂಚರ ಹೆಸರು ನನಗೆ ಹೇಳಲು ಬರುವುದಿಲ್ಲ. ಚಾಸಾ–32 ರವರ ವಾಹಿದ್ ನವರ ಗ್ಯಾರೇಜ್ ನಲ್ಲಿ 2 ನೇ ಆರೋಪಿ ನಿಲ್ಲಿಸಿಟ್ಟ ಜೆನ್ ಕಾರನ್ನು ನಾವು ನೋಡಿರುವುದಿಲ್ಲ. ನಮ್ಮ ಜೊತೆ ಬಂದಿದ್ದ ಪೊಲೀಸರು ಸದರಿ ಕಾರ್ ನ್ನು ನೋಡಿದ ಬಗ್ಗೆ ನನಗೆ ಗೊತ್ತಿಲ್ಲ. ನಾವು ಖಾನಾಪುರಕ್ಕೆ ಹೋಗದೆ ಇದ್ದರೂ ಸಹ ಹೋಗಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

29. ನನ್ನನ್ನು ದಾಂಡೇಲಿಗೆ ಕರೆದುಕೊಂಡು ಹೋದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ನಾನು ದಾಂಡೇಲಿಗೆ ಹೋಗದ ಕಾರಣ ಪೊಲೀಸರ ಹೆಸರು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಿಃ 23–10–2018 ರಂದು ಬೆಳಿಗ್ಗೆ 08–00 ಗಂಟೆಗೆ ನಾವು ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಒಬ್ಬರು ಪಿ.ಎಸ್.ಐ ಹಾಗೂ 4 ಜನ ಪೊಲೀಸ ಸಿಬ್ಬಂದಿಗಳು ಇದ್ದರು. ಪಿ.ಎಸ್.ಐ ಕೊಠಡಿಯಲ್ಲಿ 2 ಮತ್ತು 3 ನೇ ಆರೋಪಿಗಳು ಕೃತ್ಯವನ್ನು ಮಾಡಿದ ಬಗ್ಗೆ ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಪೊಲೀಸರು 2 ಮತ್ತು 3 ನೇ ಆರೋಪಿಗಳನ್ನು ವಿಚಾರಣೆ ಮಾಡುವವರೆಗೆ ಬೆಳಿಗ್ಗೆ 09–30 ಗಂಟೆ ಆಗಿರುತ್ತದೆ. ಸಾಮಾನ್ಯವಾಗಿ ಪೊಲೀಸರು ಆರೋಪಿಗಳನ್ನು 3 ನೇ ವ್ಯಕ್ತಿಗಳ ಸಮಕ್ಷಮ ವಿಚಾರಣೆ ಮಾಡುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳನ್ನು ಪೊಲೀಸರಿಂದ ಕೇಳಿ ತಿಳಿದುಕೊಂಡು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರ ಹೇಳಿಕೆಯ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನಮ್ಮನ್ನು ಹಾಗೂ 2 ಮತ್ತು 3 ನೇ ಆರೋಪಿಗಳನ್ನು ಪೊಲೀಸ್ ಠಾಣೆಯಿಂದ ಆಕಳಗವಿ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ನನ್ನ ಬಾವನ ಶವ ಸಿಕ್ಕ ಸ್ಥಳದಲ್ಲಿ ಹಾಗೂ ವಾಹಗಳನ್ನು ನಿಲ್ಲಿಸಿದ ಸ್ಥಳಗಳಲ್ಲಿ ಪಂಚನಾಮೆ ಮಾಡಿ, ವಸ್ತುಗಳನ್ನು ಜಪ್ತುಪಡಿಸಿಕೊಂಡರು ಹಾಗೂ ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ಹಸ್ತಾಂತರಿಸಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನಿಂದ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿಲ್ಲ.

30. ನನ್ನ ಬಾವ ಪ್ರೇಮ ಕುಮಾರ ಅಂಬೇಡ್ಕರ ಸಂಘದ ಜಿಲ್ಲಾಧ್ಯಕ್ಷ ಎಂದರೆ ಸರಿ. ಸದರಿ ಸಂಘದ ವತಿಯಿಂದ ನನ್ನ ಬಾವ ಸಾಕಷ್ಟು ಸಾಮಾಜಿಕ ಹೋರಾಟಗಳನ್ನು ಮಾಡುತ್ತಿದ್ದರು ಎಂದರೆ ಸರಿ. ಆದ ಕಾರಣ ಆತನು ಜನರಲ್ಲಿ ವೈಷ್ಯಮ ಮಾಡಿಕೊಂಡಿದ್ದ ಎಂದರೆ ಸರಿಯಲ್ಲ. ಆದ್ದರಿಂದ ಆತನ ಮೇಲೆ ವೈಷ್ಯಮ ಹೊಂದಿದವರು ನನ್ನ ಬಾವನ ಸಾವಿಗೆ ಕಾರಣ ಇರಬಹುದು ಎಂದರೆ ಸರಿಯಲ್ಲ. ನಿಜವಾದ ಆರೋಪಿಗಳು ಸಿಗದೆ ಇರುವ ಕಾರಣ ಪೊಲೀಸರು 2 ಮತುತ 3 ನೇ ಆರೋಪಿಗಳಿಗೆ ಹೆದರಿಸಿ, ಅವರ ಹೇಳಿಕೆಗಳನ್ನು ಪಡೆದುಕೊಂಡು, ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀಮತಿ ಎಸ್.ಎಸ್.ಜಿ ವಕೀಲರಿಂದ</u>**

31. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ 4 ಮತ್ತು 5 ನೇ ಆರೋಪಿಗಳು 1 ನೇ ಆರೋಪಿಗೆ ತಪ್ಪಿಸಿಕೊಳ್ಳಲು ಸಹಾಯ ಮಾಡಿರುತ್ತಾರೆ ಎಂದು ಪೊಲೀಸರು ನನ್ನ ಬಳಿ ಹೇಳಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 4 ಮತ್ತು 5 ನೇ ಆರೋಪಿಗಳಿಗೆ ನನ್ನ ಬಾವನ ಕೊಲೆಯಾದ ವಿಷಯ ತಿಳಿದಿದ್ದರೂ ಸಹ ಪೊಲೀಸರಿಗೆ ವಿಷಯ ತಿಳಿಸದೆ ಮುಚ್ಚಿಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ದಾಖಲಿಸಿರುವ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 5 ನೇ ಆರೋಪಿತರ ಪರ ಶ್ರೀ ಹೆಚ್.ಎಸ್.ಎಸ್.ವಕೀಲರಿಂದ</u>**

4 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**<u>ಮರು ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

32. ಪಾಟೀ ಸವಾಲಿನಲ್ಲಿ ಹೇಳಿರುವ ದಿಃ 18-10-2018 ರಂದು 2 ಪಂಚನಾಮೆಗಳು, ದಿಃ 19-10-2018 ರಂದು 2 ಪಂಚನಾಮೆಗಳು ಮತ್ತು ದಿಃ 20-10-2018 ರಂದು 1 ಪಂಚನಾಮೆಯ ಎಂದು ಹೇಳಿರುವ ಸಂಬಂಧ ಸರಕಾರಿ ಅಭಿಯೋಜಕರು ಅವುಗಳು ಯಾವ ವಿಷಯಕ್ಕೆ ಸಂಬಂಧಿಸಿದ ಪಂಚನಾಮೆಗಳು ಎಂದು ಪ್ರಶ್ನೆ ಕೇಳಿದ್ದು, ಅದಕ್ಕೆ ಉತ್ತರವಾಗಿ ಸಾಕ್ಷಿಯು ನಾವು ಹೋಗಿದ್ದ ಸ್ಥಳಗಲ್ಲಿ 5 ಬಾರಿ ಪೋಟೋ ತೆಗೆದರು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಪೋಟೋ ತೆಗೆದಿರುವುದು ಪಂಚನಾಮೆಯಾಗಿರುತ್ತದೆ ಎಂದು ನುಡಿಯುತ್ತಾರೆ.

**ಮರು ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಆರ್.ಕೆ.ಎಂ ವಕೀಲರಿಂದ**

33. ಸರಕಾರಿ ಅಭಿಯೋಜಕರ ಮುಖ್ಯ ವಿಚಾರಣೆಯಲ್ಲಿ ಪಂಚನಾಮೆ ಎನ್ನುವ ವಿಷಯಗಳ ಕುರಿತು ಸಾಕ್ಷ್ಯವನ್ನು ನುಡಿದಿರುತ್ತೇನೆ ಎಂದರೆ ಸರಿ. ಆದ ಕಾರಣ ನನಗೆ ಪಂಚನಾಮೆ ಎಂದರೆ ಏನು ಎಂದು ನನಗೆ ತಿಳಿದಿರುತ್ತದೆ ಎಂದರೆ ಸಾಕ್ಷಿಯು ಪೋಟೋ ತೆಗೆದ ಬಗ್ಗೆ ನುಡಿಯುತ್ತಾರೆ. ಸತಾರದ ಪೊಲೀಸ್ ಠಾಣೆಯಲ್ಲಿ ನಮ್ಮ ಜೊತೆ ಬಂದಿದ್ದ ಪೊಲೀಸರು ನನ್ನ ಬಾವ ಕಾಣೆಯಾದ ಬಗ್ಗೆ ದೂರು ದಾಖಲಾದ ಬಗ್ಗೆ ಲಿಖಿತದಲ್ಲಿ ತಿಳಿಸಿರುತ್ತಾರೆ. ಪಾಟೀ ಸವಾಲಿನಲ್ಲಿ 5 ಪಂಚನಾಮೆಗಳ ಬಗ್ಗೆ ನುಡಿದಿರುತ್ತೇನೆ ಎಂದರೆ ಸಾಕ್ಷಿಯು ಪೋಟೋ ತೆಗೆಯುವುದನ್ನೆ ಪಂಚನಾಮೆ ಎಂದು ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಪಂಚನಾಮೆ ಎನ್ನುವ ಶಬ್ದವನ್ನು ಪಂಚನಾಮೆಯ ಅರ್ಥದಲ್ಲಿಯೇ ಹೇಳಿ ಅದನ್ನು ಈಗ ಪೋಟೋ ತೆಗೆದಿರುವುದಕ್ಕೆ ಪಂಚನಾಮೆ ಎಂದು ತಿಳಿದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 3 ದಿನಗಳ ಪ್ರಯಾಣದ ಅವಧಿಯಲ್ಲಿ ಒಟ್ಟು ಪೋಟೋಗಳನ್ನು ತೆಗೆದಿರುತ್ತಾರೆ. 5 ಪೋಟೋಗಳ ನಾನು 2 ಪೋಟೋಗಳಲ್ಲಿ ಇರುತ್ತೇನೆ. ಸದರಿ ಪೋಟೋಗಳನ್ನು ನಾನು ಈ ಪ್ರಕರಣದಲ್ಲಿ ನೋಡಿರುವುದಿಲ್ಲ.

**ಮರು ಪಾಟೀ ಸವಾಲುಃ 2 ರಿಂದ 5 ನೇ ಆರೋಪಿ ಪರ ವಕೀಲರುಗಳು 1 ನೇ ಆರೋಪಿ ಪರ ವಕೀಲರು ಮಾಡಿದ ಮರು ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ